# ನಾರಾಯಣನೆಂಬ ನಾಮದ ಬೀಜವ

1. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 320.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 326.
3. **Note:** This song is not available in the books of Shri Betageri Krishna Sharma and Shri Bengeri Huchha Rayaru also in the books of Gorebala Hanumantha Rayaru.
4. **Note:** Lyrics given here are as per Ref. 1. The wordings in Ref. 2 are same as in Ref. 1 except few minor differences which are not considered here.
5. **Note:** Singer has followed these lyrics.

ರಾಗ: ಬಿಲಹರಿ ತಾಳ: ಅಟ್ಟ

ನಾರಾಯಣನೆಂಬ ನಾಮದ ಬೀಜವ ನಿಮ್ಮ
ನಾಲಿಗೆ ತುದಿಯಿಂದಲಿ ಬಿತ್ತಿರಯ್ಯ ॥ ಪ ॥

ಹೃದಯ ಹೊಲವ ಮಾಡಿ ಮನವ ನೇಗಿಲ ಮಾಡಿ
ಶ್ವಾಸೋಚ್ಛ್ವಾಸವ ಎರಡೆತ್ತು ಮಾಡಿ
ಜ್ಞಾನವೆಂಬ ಹಗ್ಗ ಕಣ್ಣಿಯ ಮಾಡಿ
ನಿರ್ಮಾಮವೆಂಬ ಗುಂಟಲಿ ಹರವಿರಯ್ಯಾ ॥ 1 ॥

ಮದಮತ್ಸರಗಳೆಂಬ ಮರಗಳನೆ ತರಿದು
ಕಾಮಕ್ರೋಧಗಳೆಂಬ ಕಳೆಯ ಕಿತ್ತಿ
ಪಂಚೇದ್ರಿಯವೆಂಬ ಮಂಚಿಕೆಯನೆ ಹಾಕಿ
ಚಂಚಲವೆಂಬ ಹಕ್ಕಿಯ ಹೊಡೆಯಿರಯ್ಯ ॥ 2 ॥

ಉದಯಾಸ್ತಮಾನವೆಂಬ ಎರಡು ಕೊಳಗದಲ್ಲಿ
ಆಯುಷ್ಯವೆಂಬ ರಾಶಿ ಅಳೆಯುತಿರೆ

ಸ್ವಾಮಿ ಶ್ರೀ ಪುರಂದರ ವಿಠಲನ ನೆನೆದರೆ
ಪಾಪರಾಶಿಯ ಪರಿಹರಿಸುವನಯ್ಯ ॥ 3 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ನಾಮಸ್ಮರಣೆಯನ್ನು ಬೇಸಾಯದ ರೂಪಕಕ್ಕೆ ಹೊಂದಿಸಿಕೊಂಡಿರುವ ಪದ. ನಾರಾಯಣನೆಂಬ ನಾಮವೇ ಬೀಜ; ಅದನ್ನುಚ್ಚರಿಸುವ ನಾಲಗೆಯೇ ಬೀಜವನ್ನು ಬಿತ್ತುವ ಸಾಧನ. ಅಂತರಂಗವೇ ಹೊಲ; ಅಲ್ಲಿ ಉತ್ತಮ ಸಂಸ್ಕಾರಗಳಿಂದ ಉಳುವ ನೇಗಿಲು ಮನಸ್ಸು; ಅದಕ್ಕೆ ಹೂಡಿರುವ ಎತ್ತುಗಳು ಶ್ವಾಸಕ್ರಿಯೆಗಳು. ಮಾಹಾತ್ಮ್ಯ ಜ್ಞಾನವೇ ಎತ್ತುಗಳನ್ನು ಕಟ್ಟಿರುವ ಹಗ್ಗ. ಅಹಂಕಾರ ಮಮಕಾರಗಳನ್ನು ಬಿಡುವುದೇ ಹಗ್ಗವನ್ನು ಕಟ್ಟುವ ಗೂಟ. ಪೈರು ಬೆಳೆಯುವುದಕ್ಕೆ ಅಡ್ಡಿಯಾಗುವ ಗಿಡಮರಗಳು ಮದ-ಮತ್ಸರಗಳು; ಕಳೆ ಕಾಮಕ್ರೋಧ. ಮತ್ತೆ ಹಕ್ಕಿಗಳು ಬಂದು ಬೆಳೆಯನ್ನು ಹಾಳು ಮಾಡದಂತೆ, ಹಕ್ಕಿಗಳನ್ನು ಹಿಡಿಯಲು ಮಂಚಿಕೆಯೊಂದನ್ನು ಹೊಲದಲ್ಲಿ ಕಟ್ಟುವರು. ಮನಸ್ಸಿನ ಚಾಂಚಲ್ಯವೆಂಬುದೇ ನಾಮಸ್ಮರಣೆಯ ಪೈರನ್ನು ಹಾಳುಮಾಡುವ ಹಕ್ಕಿ; ಐದು ಇಂದ್ರಿಯಗಳ ಮೇಲೆ ಒಡೆತನವಿರುವುದೇ ಹಕ್ಕಿಗಳನ್ನು ಹಿಡಿಯುವ ಮಂಚಿಕೆ. **'ಇಂದ್ರಿಯಾಣಿ ಪ್ರಮಾಥಾನಿ ಹರಂತಿ ಪ್ರಸಭಂ ಮನಃ'** ಎಂಬ ಗೀತಾವಾಕ್ಯದ ಪ್ರಭಾವ ಇಲ್ಲಿ ಕಾಣುತ್ತದೆ. ಮನುಷ್ಯನ ಆಯುಸ್ಸು ಮುಂಜಾನೆ-ಸಂಜೆಗಳಿಂದ ಸವೆಯುತ್ತ ಬರುತ್ತದೆ. ಹೀಗೆ ಬದುಕು ಸಾಗಿ ಹೋಗುತ್ತಿರುವಾಗ ನಾಮಸ್ಮರಣೆಯ ಬೆಳೆಯನ್ನು ಬೆಳೆದುಕೊಳ್ಳಬೇಕು.

**ನಿರ್ಮಾಮ** = **ನಿರ್ಮಮ** = ಅಹಂಕಾರವಿಲ್ಲದವನು

**Classification:** Keertane
**Ankita:** sri purandara vittala
**Location:** NA
**Category:** Nama Smarane,
**Sub-Category:** Narayana, nalige, hrudaya, jnana, sittu, pakshi, papa,
**Pravachana:** NA
**Explanation:** Dr. A. B. Shamachar, Bengaluru.